# ಕರ್ನಾಟಕ ವಿಧಾನ ಪರಿಷತ್ತು

**ಲಘು ಪ್ರಕಟಣೆ ಭಾಗ-2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ:18ನೇ ಆಗಸ್ಟ್ 2020**

**ಸಂಖ್ಯೆ:73**

ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆಯ ವತಿಯಿಂದ ದಿನಾಂಕ:31.07.2020 ರಂದು ಹೊರಡಿಸಿರುವ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (2ನೇ ತಿದ್ದುಪಡಿ) ಅಧ್ಯಾದೇಶ, 2020 (ಕರ್ನಾಟಕ ಅಧ್ಯಾದೇಶ ಸಂಖ್ಯೆ-16) ಹಾಗೂ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳು (ತಿದ್ದುಪಡಿ) ಅಧ್ಯಾದೇಶ, 2020 (ಕರ್ನಾಟಕ ಅಧ್ಯಾದೇಶ ಸಂಖ್ಯೆ-17) ಪ್ರತಿಗಳನ್ನು **https://erajyapatra. karnataka.gov.in/** ನಲ್ಲಿ ಅಥವಾ ವಿಧಾನ ಪರಿಷತ್ತಿನ ಅಂತರ್ಜಾಲ ತಾಣ **www.kla.kar.nic.in/council/council.htm** ದಲ್ಲಿ ಪಡೆದುಕೊಳ್ಳಬಹುದಾಗಿದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ

**ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ.**

**www.kla.kar.nic.in/council/council.htm**

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ ಎ<br>Part – IV A | ಬೆಂಗಳೂರು, ಶುಕ್ರವಾರ, ೩೧, ಜುಲೈ, ೨೦೨೦ ( ಶ್ರಾವಣ ,೯, ಶಕವರ್ಷ, ೧೯೪೨)<br>Bengaluru, FRIDAY, 31, JULY, 2020 ( Shravana , 9, ShakaVarsha,1942) | ನಂ. ೩೨೨<br>No. 322 |
|---|---|---|


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 45 ಶಾಸನ 2020, ಬೆಂಗಳೂರು, ದಿನಾಂಕ: 31.07.2020**

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳು (ತಿದ್ದುಪಡಿ) ಅಧ್ಯಾದೇಶ, 2020 ಇದಕ್ಕೆ 2020ರ ಜುಲೈ ತಿಂಗಳ 31ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 17 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## 2020 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ-17

## ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧ್ಯಾದೇಶ, 2020

(ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2020 ರ ಜುಲೈ 31 ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ).

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2007ನ್ನು (2007ರ ಕರ್ನಾಟಕ ಅಧಿನಿಯಮ 21) ಮತ್ತಷ್ಟು ತಿದ್ದುಪಡಿ ಮಾಡಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕ ವಿಷಯಗಳಿಗಾಗಿ ಒಂದು ಅಧ್ಯಾದೇಶ.

ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅಧ್ಯಾದೇಶವನ್ನು ಪ್ರಖ್ಯಾಪಿಸಲು, ಶೀಘ್ರ ಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯಗೊಳಿಸುವಂಥ ವಿದ್ಯಮಾನಗಳು ಉಂಟಾಗಿವೆಯೆಂದು ಕರ್ನಾಟಕದ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಈಗ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕದ ರಾಜ್ಯಪಾಲರು ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿದ್ದಾರೆ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧ್ಯಾದೇಶವನ್ನು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧ್ಯಾದೇಶ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. 4ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007 (2007ರ ಕರ್ನಾಟಕ ಅಧಿನಿಯಮ 21) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 4ನೇ ಪ್ರಕರಣದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶದ ಸಂದರ್ಭದಲ್ಲಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| (ಎ) | ಆಯುಕ್ತರು, ಬಿಬಿಎಂಪಿ | ಚೇರ್ಮನ್ |
| (ಬಿ) | ಮುಖ್ಯ ಆರೋಗ್ಯ ಅಧಿಕಾರಿ (ಸಾರ್ವಜನಿಕ ಆರೋಗ್ಯ) | ಸದಸ್ಯರು |
| (ಸಿ) | ಅಧ್ಯಕ್ಷ ಅಥವಾ ಕಾರ್ಯದರ್ಶಿ, ಭಾರತೀಯ ವೈದ್ಯಕೀಯ ಸಂಘ, ರಾಜ್ಯ ಕೇಂದ್ರ ಕಾರ್ಯಸ್ಥಾನಗಳು | ಸದಸ್ಯರು |
| (ಡಿ) | ಜಂಟಿ ನಿರ್ದೇಶಕರು, ಆಯುಷ್ | ಸದಸ್ಯರು |
| (ಇ) | ಕುಂದುಕೊರತೆ ನಿವಾರಣಾದೊಂದಿಗೆ ಪ್ರಾಧಿಕಾರವು ವ್ಯವಹರಿಸುವಾಗ ಒಬ್ಬರು ಮಹಿಳಾ ಪ್ರತಿನಿಧಿ | ಸದಸ್ಯರು |

ಮತ್ತು ಪರಂತು, ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧ್ಯಾದೇಶ, 2020ರ ಪ್ರಾರಂಭದ ದಿನಾಂಕದಂದು ಮತ್ತು ದಿನಾಂಕದಿಂದ, 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಮುಂದೆ ಬಾಕಿಯಿರುವ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶಕ್ಕೆ ಸಂಬಂಧಿಸಿದ ಎಲ್ಲಾ ಅರ್ಜಿಗಳನ್ನು, ಮೊದಲ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ ವರ್ಗಾವಣೆ ಮಾಡತಕ್ಕದ್ದು ಮತ್ತು ಅದು, ಅವುಗಳು ತನ್ನ ಮುಂದೆ ದಾಖಲಾಗಿದ್ದಲ್ಲಿ ಹೇಗೋ ಹಾಗೆ ಅವುಗಳನ್ನು ವಿಲೆ ಮಾಡತಕ್ಕದ್ದು."

**3. 16ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 16ನೇ ಪ್ರಕರಣದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಮೇಲಿನ ಅಪೀಲು ಪ್ರಾಧಿಕಾರವು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| (ಎ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಚೇರ್ಮನ್ |
| (ಬಿ) | ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು | ಸದಸ್ಯರು |

| | | |
|---|---|---|
| (ಸಿ) | ನಿರ್ದೇಶಕರು, ಆಯುಷ್ | ಸದಸ್ಯರು |
| (ಡಿ) | ನಿರ್ದೇಶಕರು, ವೈದ್ಯಕೀಯ ಶಿಕ್ಷಣ | ಸದಸ್ಯರು |
| (ಇ) | ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಜನರಲ್ ಮೆಡಿಸಿನ್‌ನಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ ಒಬ್ಬರು ಕ್ಲಿನಿಷಿಯನ್ | ಸದಸ್ಯರು |

ಮತ್ತು ಪರಂತು, ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧ್ಯಾದೇಶ, 2020ರ ಪ್ರಾರಂಭದ ದಿನಾಂಕದಂದು ಮತ್ತು ದಿನಾಂಕದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶದ ವ್ಯಾಪ್ತಿಯೊಳಗಿನ, 16ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಪೀಲು ಪ್ರಾಧಿಕಾರದ ಮುಂದೆ ಬಾಕಿಯಿರುವ ಎಲ್ಲಾ ಅಪೀಲುಗಳನ್ನು, ಮೊದಲ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗಾಗಿನ ಅಪೀಲು ಪ್ರಾಧಿಕಾರಕ್ಕೆ ವರ್ಗಾವಣೆ ಮಾಡತಕ್ಕದ್ದು ಮತ್ತು ಅದು, ಅವುಗಳು ತನ್ನ ಮುಂದೆ ದಾಖಲಾಗಿದ್ದಲ್ಲಿ ಹೇಗೋ ಹಾಗೆ ಅವುಗಳನ್ನು ವಿಲೆ ಮಾಡತಕ್ಕದ್ದು."

**ವಜೂಭಾಯಿ ವಾಲಾ**
ಕರ್ನಾಟಕದ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

## PARLIAMENTARY AFFAIRS AND LEGISLATION SECRETARIAT

### NOTIFICATION

**NO. SAMVYASHAE 45 SHASANA 2020, BENGALURU, dated: 31.07.2020**

Ordered that the translation of ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳು (ತಿದ್ದುಪಡಿ) ಅಧ್ಯಾದೇಶ, 2020 (2020 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 17) in English language, be published as authorized by the Governor of Karnataka under clause (3) of Article 348 of the Constitution of India in the Karnataka Gazette for general information.

The following translation of **Karnataka Khasagi Vaidyakeeya Samsthegalu (Tiddupadi) Adhyadesha, 2020** (2020 ra Karnataka Adhyadesha sankhye: 17) in English language is published in the Official Gazette as authorized by the Governor of Karnataka under clause (3) of Article 348 of the Constitution of India.

# KARNATAKA ORDINANCE NO. 17 OF 2020
# THE KARNATAKA PRIVATE MEDICAL ESTABLISHMENTS (AMENDMENT) ORDINANCE, 2020

(Promulgated by the Governor of Karnataka in the Seventy first year of the Republic of India and First published in the Karnataka Gazette Extra-ordinary on the 31st day of July, 2020)

An Ordinance further to amend the Karnataka Private Medical Establishments Act, 2007 (Karnataka Act 21 of 2007) and for matters connected therewith or incidental thereto;

Whereas both the Houses of the state legislature are not in session and the Governor of Karnataka is satisfied that the circumstances exist which render it necessary for him to take immediate action to promulgate the Ordinance for the purposes hereinafter appearing;

Now, therefore, in exercise of the powers conferred by clause (1) of Article 213 of the Constitution of India, the Governor of Karnataka is pleased to promulgate the following Ordinance, namely:-

**1. Short title and commencement.-** (1) This Ordinance may be called the Karnataka Private Medical Establishments (Amendment) Ordinance, 2020.

(2) It shall come into force at once.

**2. Amendment of section 4.-** In the Karnataka Private Medical Establishments Act, 2007 (Karnataka Act 21 of 2007) (hereinafter referred to as the Principal Act), in section 4, the following proviso shall be inserted, namely:-

"Provided that, in respect of the Bruhat Bengaluru Mahanagara Palike area, the Registration and Grievance Redressal Authority shall consist of the following, namely:-

| | | |
|---|---|---|
| (a) | The Commissioner, BBMP | Chairman |
| (b) | The Chief Health Officer (Public Health) | Member |
| (c) | The President or Secretary of Indian Medical association, State Head quarters | Member |

| | | |
|---|---|---|
| (d) | The Joint Director, AYUSH | Member |
| (e) | One woman representative when the authority deals with grievance redressal | Member |

Provided further that, on and from the date of commencement of the Karnataka Private Medical Establishments (Amendment) Ordinance, 2020 all applications pertaining to Bruhat Bengaluru Mahanagara Palike area, pending before the Registration and Grievance Redressal Authority specified in section 4, shall be transferred to the Registration and Grievance Redressal Authority specified in the first proviso and it shall dispose of them, as if, they were filed before it."

**3. Amendment of section 16.-** In section 16 of the Principal Act, the following proviso shall be inserted, namely:-

"Provided that, the Appellate Authority over the Registration and Grievance Redressal Authority of the Bruhat Bengaluru Mahanagara Palike area, shall consist of the following, namely:-

| | | |
|---|---|---|
| (a) | The Additional Chief Secretary or Principal Secretary or Secretary to Government, Health and Family Welfare Department | Chairman |
| (b) | The Director, Health and Family Welfare Services | Member |
| (c) | The Director, AYUSH | Member |
| (d) | The Director of Medical Education | Member |
| (e) | One Clinician with post graduation in General Medicine nominated by the State Government | Member |

Provided further that, on and from the date of commencement of the Karnataka Private Medical Establishments (Amendment) Ordinance, 2020 all appeals pending before the Appellate Authority specified in section 16, within the jurisdiction of Bruhat Bengaluru Mahanagara Palike area shall be transferred to the Appellate Authority for Bruhat Bengaluru Mahanagara Palike, specified in the first proviso and it shall dispose of them, as if, they were filed before it."

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



The above translation of ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳು (ತಿದ್ದುಪಡಿ) ಅಧ್ಯಾದೇಶ, 2020 (2020 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ:17) published in the official Gazette under clause (3) of Article 348 of the Constitution of India.

**VAJUBHAI VALA**
**GOVERNOR OF KARNATAKA**

By order and in the name of the
Governor of Karnataka.

**(K. DWARAKANATH BABU)**
Secretary to Government
Department of Parliamentary Affairs
and Legislation.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ,೩೧, ಜುಲೈ,೨೦೨೦( ಶ್ರಾವಣ,೯, ಶಕವರ್ಷ ೧೯೪೨)<br>Bengaluru, FRIDAY,31,JULY,2020( Shravana,9, ShakaVarsha 1942) | ನಂ.೩೨೧<br>No. 321 |
|---|---|---|


**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 46 SHASANA 2020, BENGALURU, DATED:31.07.2020**

The Karnataka Town and Country Planning (Second Amendment) Ordinance, 2020 ಇದಕ್ಕೆ 2020ರ ಜುಲೈ ತಿಂಗಳ 31ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ:16 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**KARNATAKA ORDINANCE NO 16 OF 2020**

**THE KARNATAKA TOWN AND COUNTRY PLANNING (SECOND AMENDMENT) ORDINANCE, 2020**

(Promulgated by the Governor of Karnataka in the seventy-first year of the Republic of India and first published in the Karnataka Gazette Extra-Ordinary on 31st day of July, 2020)

An Ordinance further to amend the Karnataka Town and Country Planning Act, 1961 (Karnataka Act 11 of 1963) and for matters connected therewith or incidental thereto;

Whereas both Houses of the state legislature are not in session and the Governor of Karnataka is satisfied that the circumstances exist which render it necessary for him to take immediate action to promulgate the Ordinance for the purposes hereinafter appearing;

Now, therefore, in exercise of the powers conferred by clause (1) of Article 213 of the Constitution of India, the Governor of Karnataka is pleased to promulgate the following Ordinance, namely:-

**1. Short title and commencement.**- (1) This Ordinance may be called the Karnataka Town and Country Planning (Second Amendment) Ordinance, 2020.

(2) It shall come into force at once.

**2. Insertion of new section 18-B.**- After section 18-A of the Karnataka Town and Country Planning Act, 1961 (Karnataka Act 11 of 1963), the following shall be inserted, namely:-

**"18-B. Levy of premium charges for grant of Premium Floor Area Ratio.**- (1) The Authority may grant permission for premium floor area ratio in the areas identified for the purpose in the Zonal regulations of the master plan.

(2) Where an application is made for grant of permission for utilization of premium floor area ratio for the development of a building under section 15, the Authority may levy premium charges, at such rate, not exceeding one third of the estimated increase in value of land and building as may be prescribed by the Government from time to time, for grant of an premium floor area ratio, not exceeding the limits as specified in the zonal regulations of the master plan.

**Explanation:** For the purpose of this section, "premium floor area ratio" means additional floor area ratio permitted over and above the ordinary permissible floor area ratio."

**VAJUBHAI VALA**
**GOVERNOR OF KARNATAKA**

By order and in the name of the Governor of Karnataka,

**(K. DWARAKANATH BABU)**
Secretary to Government Department of Parliamentary Affairs and Legislation.

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 46 ಶಾಸನ 2020, ಬೆಂಗಳೂರು, ದಿನಾಂಕ:31.07.2020.**

The Karnataka Town and Country Planning (Second Amendment) Ordinance, 2020 ಇದಕ್ಕೆ 2020ರ ಜುಲೈ ತಿಂಗಳ 31ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 16 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2020 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ -16**

**ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಎರಡನೇ ತಿದ್ದುಪಡಿ) ಅಧ್ಯಾದೇಶ, 2020**

(ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2020 ರ ಜುಲೈ 31 ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ).

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧ್ಯಾದೇಶ.

ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅಧ್ಯಾದೇಶವನ್ನು ಪ್ರಖ್ಯಾಪಿಸಲು, ಶೀಘ್ರ ಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯಗೊಳಿಸುವಂಥ ವಿದ್ಯಮಾನಗಳು ಉಂಟಾಗಿವೆಯೆಂದು ಕರ್ನಾಟಕದ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಈಗ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕದ ರಾಜ್ಯಪಾಲರು ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿದ್ದಾರೆ, ಎಂದರೆ:

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧ್ಯಾದೇಶವನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಎರಡನೇ ತಿದ್ದುಪಡಿ) ಅಧ್ಯಾದೇಶ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**2. 18-ಬಿ ಹೊಸ ಪ್ರಕರಣದ ಸೇರ್ಪಡೆ.-** ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) 18-ಎ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**18-ಬಿ. ಪ್ರೀಮಿಯಮ್ ನೆಲ ವಿಸ್ತೀರ್ಣ ಅನುಪಾತ (premium floor area ratio) ಮಂಜೂರಾತಿಗಾಗಿ ಪ್ರೀಮಿಯಮ್ ಚಾರ್ಜುಗಳನ್ನು ವಿಧಿಸುವುದು.-** (1) ಪ್ರಾಧಿಕಾರವು ಮಾಸ್ಟರ್ ಪ್ಲಾನ್‌ನ ವಲಯವಾರು ವಿನಿಯಮಗಳಲ್ಲಿನ ಉದ್ದೇಶಕ್ಕಾಗಿ ಗುರುತಿಸಲಾದ ಪ್ರದೇಶಗಳಲ್ಲಿ ಪ್ರೀಮಿಯಮ್ ನೆಲ ವಿಸ್ತೀರ್ಣ ಅನುಪಾತಕ್ಕಾಗಿ ಅನುಮತಿಯನ್ನು ನೀಡಬಹುದು.

(2) 15ನೇ ಪ್ರಕರಣದ ಅಡಿಯಲ್ಲಿ ಕಟ್ಟಡದ ಅಭಿವೃದ್ಧಿಗಾಗಿ ಪ್ರೀಮಿಯಮ್ ನೆಲ ವಿಸ್ತೀರ್ಣ ಅನುಪಾತದ ಬಳಕೆಗಾಗಿ ಅನುಮತಿಯನ್ನು ನೀಡುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಿದಲ್ಲಿ, ಪ್ರಾಧಿಕಾರವು, ಮಾಸ್ಟರ್ ಪ್ಲಾನ್‌ನ ವಲಯವಾರು ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಮಿತಿಗಳನ್ನು ಮೀರದಂತೆ, ಪ್ರೀಮಿಯಮ್ ನೆಲ ವಿಸ್ತೀರ್ಣ ಅನುಪಾತದ ಮಂಜೂರಾತಿಗಾಗಿ, ಕಾಲಕಾಲಕ್ಕೆ ಸರ್ಕಾರವು ನಿಯಮಿಸಬಹುದಾದಂತೆ ಭೂಮಿ ಮತ್ತು ಕಟ್ಟಡದ ಮೌಲ್ಯದಲ್ಲಿ ಅಂದಾಜುಮಾಡಿದ ಹೆಚ್ಚಳದ ಮೂರನೇ ಒಂದನ್ನು ಮೀರದ ಅಂಥ ದರದಲ್ಲಿ ಪ್ರೀಮಿಯಮ್ ಚಾರ್ಜುಗಳನ್ನು ವಿಧಿಸಬಹುದು.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ "ಪ್ರೀಮಿಯಮ್ ನೆಲ ವಿಸ್ತೀರ್ಣ ಅನುಪಾತ" ಎಂದರೆ ಸಾಮಾನ್ಯವಾಗಿ ಅನುಮತಿಸಬಹುದಾದ ನೆಲ ವಿಸ್ತೀರ್ಣ ಅನುಪಾತಕ್ಕಿಂತಲೂ ಮೇಲೆ ಅನುಮತಿಸಿದ ಹೆಚ್ಚುವರಿ ನೆಲ ವಿಸ್ತೀರ್ಣ ಅನುಪಾತ."

The above translation of the Karnataka Town and Country Planning (Second Amendment) Ordinance, 2020 shall be authoritative text in the Kannada language under section-5 A of the Karnataka Official Language Act, 1963 (Karnataka Act 26 of 1963)

ವಜೂಭಾಯಿ ವಾಲಾ
ಕರ್ನಾಟಕದ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ದ್ವಾರಕನಾಥ್ ಬಾಬು)
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE